**ಸಾಕ್ಷಿಯನ್ನು ದಿಃ 21.07.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ದಂಡ ಪ್ರಕ್ರಿಯೇ ಸಮಿತಿ 311 ರಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇರೆಗೆ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎನ್ ವಕೀಲರಿಂದಃ-**

ನನ್ನ ವಿರುದ್ಧ ಪ್ರಧಾನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ರೇಖ ಎನ್ನುವವರು ಚೆಕ್ ಬೌನ್ಸ್ ಪ್ರಕರಣ ಹಾಕಿದ್ದಾರೆ ಎಂದರೆ ಸರಿ . ಸದರಿ ಕೇಸನ್ನು ಕುಶ ಕುಮಾರ್ ರವರು ನನ್ನಿಂದ ಎರಡು ಚೆಕ್ಕುಗಳನ್ನು ಪಡೆದುಕೊಂಡಿದ್ದು ಅವರೇ ಹಾಕಿಸಿರುತ್ತಾರೆ ಎಂದು ನುಡಿಯುತ್ತಾರೆ , ಸದರಿ ಕೇಸ್ ನಂಬರ್ 774/2021 ಆಗಿರುತ್ತದೆ ಎಂದರೆ ಸರಿ . ಸದರಿ ಕೇಸಿಗೆ ಸಂಬಂಧಿಸಿದ ಆದೇಶ ಪುಟಗಳ ಪ್ರತಿಯನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ . ಸದರಿ ದಾಖಲೆಯನ್ನು **ನಿಪಿ.7** ಎಂದು ಗುರುತಿಸಲಾಯಿತು .

ಸದರಿ ಕೇಸಿನಲ್ಲಿ ನನಗೆ ಸಮನ್ಸ್ ಜಾರಿ ಯಾಗಿತ್ತು ಎಂದರೆ ಸರಿ .ಸಮನ್ಸ್ ಜಾರಿಯಾಗಿದ್ದರೂ ಕೂಡ ನಾನು ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ . ನಾನು ಎರಡು ಕೇಸಿನಲ್ಲಿ ಒಂದೇ ದಿನ ಬೇಲ್ ತೆಗೆದುಕೊಂಡಿರುತ್ತೇನೆ ಎಂದರೆ ಸರಿ . ಸದರಿ ಜಾಮೀನಿನಲ್ಲಿ ಇಂಡ್ಲುಗೂಡು ಮತ್ತು ಮೈಸೂರಿನ ಎರಡು ವಿಳಾಸ ಕೊಟ್ಟಿರುತ್ತೇನೆ . ಈ ಕೇಸಿನಲ್ಲಿ ಸಲ್ಲಿಸಿರುವ ಬೇಲ್ ಅರ್ಜಿಯ ಮೇಲಿನ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ . ಸದರಿ ಬೇಲ್ ಅರ್ಜಿಯಲ್ಲಿ ಇಂಡ್ಲುಗೂಡು ವಿಳಾಸ ಇರುತ್ತದೆ , ಮೈಸೂರಿನ ವಿಳಾಸ ಬರೆಸಿಲ್ಲ . ನಾನು ಇಂಡ್ಲುಗೂಡಿನಲ್ಲಿಯೇ ವಾಸ ಇದ್ದರೂ ಮೈಸೂರಿನಲ್ಲಿ ವಾಸ ಇದ್ದೇನೆ ಎಂದು ಯಾವುದೇ ಸಮನ್ಸ್ ನೋಟೀಸ್ ತೆಗೆದುಕೊಂಡಿಲ್ಲ ತಿರಿಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ .

ನಾನು ಬಿ ಪಿ ಎಲ್ ಕಾರ್ಡ್ ಹೋಲ್ಡರ್ . ಬಡತನ ರೇಖೆಗಿಂತ ಕಡಿಮೆ ಇರುವವರಿಗೆ ಬಿ ಪಿ ಎಲ್ ಕಾರ್ಡ್ ಕೊಡುತ್ತಾರೆ ಎಂದರೆ ಸರಿ . ನ್ಯಾಯಾಲಯದ ಮುಂದೆ ಪಾಸ್ ಪೋರ್ಟ್ ವ್ಯವಹಾರ ಮಾಡುವ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ಜಾಮೀನನ್ನು ಪಡೆದ ಸಮಯದಲ್ಲಿ ಇಂಡ್ಲುಗೂಡಿನ ವಿಳಾಸ ಬರೆದು ಸಹಿ ಮಾಡಿರುತ್ತೇನೆ ಎಂದರೆ ಸರಿ . ಸಾಕ್ಷಿ ಪುನಃ ಓಟರ್ ಐಡಿ

ಅಲ್ಲಿ ಇರುತ್ತದೆ ಎನ್ನುತ್ತಾರೆ. ಪಿರ್ಯಾದುದಾರರಿಗೆ ಅದೇ ವಿಳಾಸವನ್ನು ಕೊಟ್ಟಿದ್ದರು ನೋಟೀಸನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ , ನಾನು ಮೈಸೂರು ವಿಳಾಸ ಹೇಳಿದ್ದೆ . ಮೈಸೂರಿನ ವಿಳಾಸ ಹೇಳದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಎಲ್ಲಾ ವಿಚಾರ ಗೊತ್ತಿದ್ದರು ಹಣ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.